ಮೈಸೂರ ಗೆಜೆಟ.

ನಂ. 44 ಸರ್ಕಾರದಿಂದ ಪ್ರಾಯಿಷ್ ಆದ್ದು. ಸನ್ 1884.

ಬೆಂಗಳೂರು, ಶನಿವಾರ, ನವೆಂಬರ್ ತಾ|| 1, ಸನ್ 1884.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ–ರೆಸಿಡೆಂಟರು, ಚೀಫ್ ಜಡ್ಜ್‌ರಯವರು, ಸರ್ವೆ ವ ಇನಾಂ ಸೂಪರ್‌ಟೆಂಡೆಂಟರು, ಕಾಂಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫೀಸರ್‌ಗಳು, ಮೈಸೂರು ಸ್ಟೇಟ್‌ರೇಯಿಲ್‌ವೆ, ರಿಜಿಸ್ಟ್ರೇರ್ಷ ಇನ್‌ಸ್ಪೆಕ್ಟರ್ ಜನರಲ್ಲವರು, ಅಂಚೇ ಬುಕ್‌ಪೀರು, ಮ್ಯುನಿಸಿಪೆಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟ್ ವ ಸೆಷ್ಷ ಜಡ್ಜ್‌ರು, ಡಿ|| ಡೆಪ್ಯೂಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜ್‌ರು, ಪೊಲೀಸ್‌ಸೂಪರ್‌ಟೆಂಡೆಂಟರು, ಫಾರೆಸ್ಟ್ರು ಆಫೀಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟ್ಸ್‌ಗಳು; ಪೋಸ್ಟ್‌ಆಫೀಸ್ ನೋಟೀಸ್‌ಗಳು.

3ನೇ ಭಾಗ–ಶ್ರೀಮ್ ಮಹಾರಾಜ ರಾಜಾಸಾಹೇಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷ್ಷಗಳು—ಇಲ್ಲ.

4ನೇ ಭಾಗ–ಸರ್ಕಾರೀ ಕಾಗದ ಪತ್ರಗಳು—ಇಲ್ಲ.

1ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೇಬರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆಗಳು.

ಮೊಕ್ಕಾಂ ಮೈಸೂರು, ತಾರೀಖು 16ನೇ ಅಕ್ಟೋಬರ್ 1884.

ನಂ. 148.—ಇದರಿಂದ ಸರ್ವರ ತಿಳುವಳಿಕೆ ಬಗ್ಗೆ ಪ್ರಕಟಿಸಲ್ಪಡುವದೇನಂದರೆ, ಮೈಸೂರು ದೇಶದ ಉತ್ಪತ್ತಿ ಬಾಬತು ಗಂಧದ ಮರದ ಸಾಲೀಯನಾ ಹರಾಜುಗಳು ಇದರಡೀಕಂಡ ತಾರೀಖು ವ ಸ್ಥಳಗಳಲ್ಲಿ ಆಯಾ ಡಿಸ್ಟ್ರಿಕ್ಟಿನ ಡಿ|| ಕಮ್ಮಿಷನರ್ ವ ಫಾರೆಸ್ಟ್ರು ಆಫೀಸರ್‌ಗಳಿಂದ ನಡಿಸಲ್ಪಡುತ್ತೆ:—

	ಸ್ವಲ್ಪ ಹೆಚ್ಚು ಕಡಿಮೆಯಾಗಿ ಟನ್‌ಗಳು.
ಶ್ರೀರಂಗಪಟ್ಣ, ತಾರೀಖು 1ನೇ ಡಿಸಂಬರ್ 1884	.. 500
ಹುಣಸೂರು, ತಾರೀಖು 4ನೇ ಡಿಟೋ ,,	
ಬೆಂಗಳೂರು, ತಾರೀಖು 8ನೇ ಡಿಟೋ ,,	.. 280
ಸೊರಬ, ತಾರೀಖು 13ನೇ ಡಿಟೋ ,,	.. 200
ಅನಂತಪುರ, ತಾರೀಖು 18ನೇ ಡಿಟೋ ,,	.. 200
ಶಿವಮೊಗ್ಗ, ತಾರೀಖು 22ನೇ ಡಿಟೋ ,,	.. 500
ತೀರ್ಥಹಳ್ಳಿ, ತಾರೀಖು 7ನೇ ಜನವರೀ 1885	.. 200
ಚಿಕ್ಕಮಗಳೂರು, ತಾ|| 14ನೇ ಡಿಟೋ ,,	.. 200
ಹಾಸನ, ತಾರೀಖು 21ನೇ ಡಿಟೋ ,,	.. 400

ಹರಾಜಿನ ಪರತ್ತುಗಳು.—ಸ್ರ 1874ನೇ ಇಸವಿ ಡಿಶಂಬರ್ 1ನೇ ಮತ್ತು ಂ 48ನೇ ನಂಬರ್ ಮೈಸೂರು ಗೆಜೆಟ್ಟಿನಲ್ಲಿ ಘಾಯಿಪ್ಪಾ ಡಲ್ಪಟ್ಟ ಪ್ರಕಾರ ಇರತಕ್ಕವು, ಮತ್ತು ಹರಾಜ್ ಕಾಲದಲ್ಲಿ ವ್ಯೋವಲ್ಪಡವವು. ತೀರ್ಥಹಳ್ಳಿ, ಚಿಕ್ಕಮಗಳೂರು ಮತ್ತು ಹಾಸನ ಈ ಸ್ಥಳಗ ಳಲ್ಲಿ ಕೊಂಡುಕೊಳ್ಳುವ ಗಂಧದ ಮರಗಳ ಕಿಮ್ಮತ್ ಪೂವತೀ ಬಗ್ಯೆ ಾಯಿದೆಯು, 1885ನೇ ಇಸವೀ ಮಾರ್ಚೀ 25ನೇ ತಾರೀಖಿಗೆ ಆಖೈರಾಗುವದು.

ತಾರೀಖು 30ನೇ ಅಕ್ಟೋಬರ್ 1884.

ನಂ. 160.—ಹಾಸನದ ಮ್ಯುನಿಶಿಪ್ ಸಿ. ವೆಂಕಟರಾಯರಿಗೆ, 1884ನೇ ಇಸವಿ ಜುಲೈ 31ನೇ ಮತ್ತು ಂ 98ನೇ ನಂಬರ್‌ಉಳ್ಳ ಈ ಆಫೀಸ್ ಇಸ್ತಿಹಾರ್‌ನಾಮೆಯಲ್ಲಿ ಕೊಡಲ್ಪಟ್ಟ ರಜಾಕ್ಕೆ ಜಾಸ್ತಿಯಾಗಿ, ಮೆಡಿಸಿಲ್ ಸರ್ಟಿಫಿಕೇಟ್ ಮೇಲೆ ಆರುತಿಂಗಳ ರಜಾ ಕೊಡಲ್ಪಟ್ಟಿರುತ್ತೆ.

ನಂ. 161.—ಅಮಲ್ದಾರ್ರುಗಳ ಇದರಡೀ ಕಂಡ ವರ್ಗಾವರ್ಗಿಗಳು ಹುಕುಂ ಮಾಡಲ್ಪಟ್ಟಿರುತವೆ:—

ಕೆ. ರಾಮಸ್ವಾಮಯ್ಯಂಗಾರ್ರಿಗೆ ಮೈಸೂರಿಂದ ಶಿವಮೊಗ್ಗಕ್ಕೆ.
ಕೆ. ರಾಮಚಂದ್ರರಾಯರಿಗೆ ಗುಂಡ್ಲುಪೇಟೆ ಯಿಂದ ಮೈಸೂರಿಗೆ.
ಖಾದರ್ ಅಲ್ಲೀಯವರಿಗೆ ಹಾಸನದಿಂದ ಗುಂಡ್ಲುಪೇಟೆಗೆ.

ನಂ. 162.—ಅಮಲ್ದಾರ್ರುಗಳ ಇದರಡೀಕಂಡ ಬಡ್ತೀಗಳು, ಹಂಗಾಮಿ ತರೀಕ್, 1884ನೇ ಇಸವಿ ನವಂಬರ್ 1ನೇ ಮತ್ತು ಂ ಲಾಗಾಯತು ಹುಕುಂ ಮಾಡಲ್ಪಟ್ಟಿರುತವೆ:—

ಕೆ. ರಾಮಚಂದ್ರರಾವ್, 2ನೇ ಗ್ರೇಡಿನಿಂದ 1ನೇ ಗ್ರೇಡಿಗೆ ಬಡತಿ.
ಖಾದರ್ ಅಲ್ಲೀ, 3ನೇ ಗ್ರೇಡಿನಿಂದ 2ನೇ ಗ್ರೇಡಿಗೆ.
ಗೋಪಾಲಕೃಷ್ಣಯ್ಯಂಗಾರ್, 4ನೇ ಗ್ರೇಡಿನಿಂದ 3ನೇ ಗ್ರೇಡಿಗೆ.
ಗುಂಡಪ್ಪ, 5ನೇ ಗ್ರೇಡಿನಿಂದ 4ನೇ ಗ್ರೇಡಿಗೆ.

ಆಕ್ಟಿಂಗ್ ಅಮಲ್ದಾರ್ ಹೆಚ್. ಆರ್. ಶ್ರೀನಿವಾಸರಾಯರು, ಹಂಗಾಮಿ ತರೀಕ್ 5ನೇ ಗ್ರೇಡ್ ಅಮಲ್ದಾರರಾಗಿರತಕ್ಕದ್ದು.

ತಾರೀಖು 21ನೇ ಮಾರ್ಚಿ 1883.

ನಂ. 84.—ಕಾರ್ಯಾರ್ಥ ದೀವಾನರವರನ್ನು ಭೇಟೀ ಮಾಡುವದಕ್ಕೆ ಅಪೇಕ್ಷಿಸುವ ದೊಡ್ಡ ಮನುಷ್ಯರು ಮಂಗಳವಾರಗಳಲ್ಲಿ ಮ ಧ್ಯಾನ್ಹಾತ್ಪರ 3 ಘಂಟೆಗೆ ಕಚ್ಚೇರಿಗೆ ಬರತಕ್ಕದ್ದು. ಈ ಬಗ್ಯೆ ಹಿಂದಿನ ದಿನ ಸೆಕ್ರಟೇರಿಯವರಿಗೆ ತಮ್ಮ ಕಾರ್ಡ್‌ಗಳನ್ನು ಕಳುಹಿಸತಕ್ಕದ್ದು.

2. ಅರ್ಜೀದಾರರು ಶುಕ್ರವಾರಗಳ ದಿನ ಮಧ್ಯಾನ್ಹಾತ್ಪರ 3 ಘಂಟೆಗೆ ಕಚ್ಚೇರಿಯಲ್ಲಿ ಕೇಳಲ್ಪಡುವರು.

ಬಯೋಜೀಬ್ ಹುಕುಂ,
ಆರ್. ವಿಜಯೀಂದ್ರರಾವ್,
ಸೆಕ್ರಟೇರಿ.

ಮಿಲಿಟೇರಿ ಇಲಾಖೆ.

ತಾರೀಖು 25ನೇ ಅಕ್ಟೋಬರ್ 1884.

ಮೈಸೂರು ಫೈದಲ್ ಫೂಜೆನಲ್ಲಿ ಇದರಡ್ಡಿಕಂಡ ಬಡ್ತಿಗಳು, ಮಾಹೆ ಮಜಕೂರು 1ನೇ ಮತ್ತು ಂ ಲಾಗಾಯತು ಹುಕುಂಮಾಡಲ್ಪಟ್ಟಿರುತವೆ:—

ವಂದನೇ ಪಟಾಲಂ ಫಸ್ಟ್ ಕ್ಲಾಸ್ ಜಮಾದಾರ್ ಮಹಮ್ಮದ್ ಅಮಿನುದ್ದಿರಿಗೆ, ಅದೆ ಪಟಾಲಂ 2ನೇ ಕ್ಲಾಸ್ ಸುಬೇದಾರಿ ಕೆಲಸಕ್ಕೆ ಬಡ್ತಿ.
ವಂದನೇ ಪಟಾಲಂ ಫಸ್ಟ್ ಕ್ಲಾಸ್ ಜವಾಲ್ದಾರ್ ಗಣೇಶಸಿಂಗ್ ಮತ್ತು ವೆರುಮಾಳ್ ಇವರಿಗೆ, ಅದೇ ಪಟಾಲಂ 2ನೇ ಕ್ಲಾಸ್ ಜಮಾದಾರಿ ಕೆಲಸಕ್ಕೆ ಬಡ್ತಿ.

ಎ. ಸಿ. ಹೇ, ಕರ್ನಲ್,
ಮಿಲಿಟೆರಿ ಸಿಕ್ರಟೇರ.